# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 383 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21-12-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಪ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಂಗಳೂರಿನಿಂದ ತುಮಕೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಯಾವುದು; ಅದು ಎಷ್ಟು ಕಿ.ಮೀ. ಇದೆ; ಏಕಪಥ ರಸ್ತೆಯಿಂದ ಯಾವಾಗ ಚತುಷ್ಪಥ ರಸ್ತೆಯನ್ನಾಗಿ ನಿರ್ಮಿಸಲಾಯಿತು. | ಬೆಂಗಳೂರಿನಿಂದ ತುಮಕೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-48ರ ಅಂತರವು 62 ಕಿ.ಮೀ. ಇರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.<br>• ರಾಷ್ಟ್ರೀಯ ಹೆದ್ದಾರಿ-48ರ ಕಿ.ಮೀ. 0.00 ರಿಂದ 10.00 ಕಿ.ಮೀ. ವರೆಗೆ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುತ್ತದೆ.<br>• ಬೆಂಗಳೂರಿನಿಂದ ನೆಲಮಂಗಲದವರೆಗಿನ ಕಿ.ಮೀ.10.00 ರಿಂದ ಕಿ.ಮೀ.29.50 ವರೆಗೆ ಇರುತ್ತದೆ. ಈ ರಸ್ತೆಯನ್ನು 6 ಪಥದ ಹೆದ್ದಾರಿಯನ್ನಾಗಿ ಈಗಾಗಲೇ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು Access Controlled Highway, Build, Operation and Transfer (BOT) ಆಧಾರದಲ್ಲಿ ನಿರ್ಮಿಸಿರುತ್ತಾರೆ. ಯೋಜನೆಯು ಪೂರ್ಣಗೊಂಡಿರುತ್ತದೆ.<br>• ನೆಲಮಂಗಲದಿಂದ ತುಮಕೂರುವರೆಗಿನ ಕಿ.ಮೀ.29.50 ರಿಂದ ಕಿ.ಮೀ. 62.00 ರವರೆಗೆ ಇರುತ್ತದೆ. ಈ ವಿಭಾಗದಲ್ಲಿ 4 ಪಥದ ರಸ್ತೆ ನಿರ್ಮಾಣದ ಯೋಜನೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ವತಿಯಿಂದ ದಿನಾಂಕ: 09.02.2004ರಂದು ನಿರ್ಮಿಸಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಆ) | ಈ ಹೆದ್ದಾರಿಯನ್ನು ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು; ಇದು ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ; (ವಿವರವಾದ ಮಾಹಿತಿ ನೀಡುವುದು) | • ಬೆಂಗಳೂರು-ನೆಲಮಂಗಲ ಹೆದ್ದಾರಿಯನ್ನು M/s.Navayuga Tollway Pvt. Ltd. ರವರು ನಿರ್ಮಿಸಿರುತ್ತಾರೆ. ಕರಾರು ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇರುತ್ತದೆ. ರಿಯಾಯಿತಿದಾರರು, ಕರಾರಿನನ್ವಯ ಹೆದ್ದಾರಿ ನಿರ್ವಹಣೆ ಮಾಡದ ಕಾರಣ ದಿನಾಂಕ: 10.03.2021 ರಂದು ರಿಯಾಯಿತಿ ಗುತ್ತಿಗೆ ಕರಾರನ್ನು ರದ್ದುಗೊಳಿಸಿ ದಿನಾಂಕ: 21.02.2021ರಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಹಿಸಿಕೊಂಡು ಟೋಲ್ ಶುಲ್ಕ ಸಂಗ್ರಹಣೆ ಮಾಡಲಾಗುತ್ತಿದೆ ಎಂದು ವರದಿಸಿರುತ್ತಾರೆ.<br>• ನೆಲಮಂಗಲ-ತುಮಕೂರು ವಿಭಾಗದ ಹೆದ್ದಾರಿಯನ್ನು M/s. JAS Tollway Pvt. Ltd ರವರಿಂದ ನಿರ್ಮಿಸಲಾಗಿದೆ. ಕರಾರು ಒಪ್ಪಂದದ ಪ್ರಕಾರ ಕಾರ್ಯಾಚರಣೆ ಮತ್ತು ನಿರ್ವಹಣೆಯ ಮುಕ್ತಾಯದ ದಿನಾಂಕವು 20.07.2021 ಆಗಿರುತ್ತದೆ. ಸದರಿ ಸಂಸ್ಥೆಯವರು ಮಧ್ಯಸ್ಥಿಕೆ ನ್ಯಾಯಮಂಡಳಿಯ (Arbitration Tribunal) ಮೊರೆ ಹೋಗಿದ್ದು, ಸ್ಥಳೀಯ ವೈಯಕ್ತಿಕ ಸಂಚಾರ |

| | | |
|---|---|---|
| | | (Local Personal Traffic) ಮತ್ತು ಸ್ಥಳೀಯ ವಾಣಿಜ್ಯ ಸಂಚಾರ (Local Commercial Traffic) ಸೋರಿಕೆಯಿಂದ ಮಧ್ಯಸ್ಥಿಕೆ ನ್ಯಾಯಮಂಡಳಿಯವರು ಸದರಿ ಸಂಸ್ಥೆಗೆ 479 ದಿನಗಳ ವಿಸ್ತರಣೆಯನ್ನು ನೀಡಿರುವುದರಿಂದ ನಿರ್ವಹಣಾ ದಿನಾಂಕ: 06.11.2022 ರಂದು ಪೂರ್ಣಗೊಂಡಿರುತ್ತದೆ. ನಂತರ ಚೊಕ್ಕೇನಹಳ್ಳಿ, ಕುಲುಮೇಪಾಳ್ಯ ಟೋಲ್ ಸಂಗ್ರಹ ಬಳಕೆದಾರರ ಶುಲ್ಕವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ದಿನಾಂಕ: 07.11.2022 ರಂದು ವಹಿಸಿಕೊಂಡಿದ್ದು, ಟೋಲ್ ಶುಲ್ಕ ಸಂಗ್ರಹ ಏಜೆನ್ಸಿಯವರಾದ ಮೆ: ಶ್ರೀ ಸಾಯಿ ಎಂಟರ್ ಪ್ರೈಸಸ್ ರವರನ್ನು ಹೆದ್ದಾರಿ ನಿರ್ವಹಣೆಗಾಗಿ ನೇಮಿಸಲಾಗಿರುತ್ತದೆ ಹಾಗೂ ಟೋಲ್ ಶುಲ್ಕ ಸಂಗ್ರಹಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಟೋಲ್ ಖಾತೆಗೆ ಜಮೆ ಮಾಡಲಾಗಿರುತ್ತದೆ ಎಂದು ವರದಿಸಿರುತ್ತಾರೆ. |
| ಇ) | ಸದರಿ ರಸ್ತೆಯ ನಿರ್ವಹಣೆ ಸಂಸ್ಥೆಯ ಒಡಂಬಡಿಕೆ ಅವಧಿಯು ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರಸ್ತೆಯನ್ನು ಟೋಲ್ ಮುಕ್ತ ರಸ್ತೆಯನ್ನಾಗಿ ಮಾಡದೇ ಸಂಸ್ಥೆಯೇ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನಿಜವೇ; | • ಬೆಂಗಳೂರು – ನೆಲಮಂಗಲ ವಿಭಾಗದ ಕಿ.ಮೀ. 10.00 ರಿಂದ 29.50 ರವರೆಗೆ ಒಡಂಬಡಿಕೆ ಅವಧಿಯು ಮುಗಿದಿರುವುದಿಲ್ಲ. ರಿಯಾಯಿತಿದಾರರ ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇರುತ್ತದೆ. ರಿಯಾಯಿತಿದಾರರು ಹೆದ್ದಾರಿಯನ್ನು ಕರಾರಿನನ್ವಯ ನಿರ್ವಹಿಸದ ಕಾರಣ ದಿನಾಂಕ: 10.02.2021ರಂದು ಕರಾರನ್ನು ರದ್ದುಗೊಳಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಯೋಜನೆಯನ್ನು ವಶಕ್ಕೆ ಪಡೆದಿದ್ದು, ಕರಾರು ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇದ್ದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ವತಿಯಿಂದ ಮೆ: ರಿದ್ದಿ ಸಿದ್ದಿ ಅಸೋಸಿಯೇಟ್ಸ್ ರವರ ಮುಖಾಂತರ ಟೋಲ್ ಫೀ ಶುಲ್ಕವನ್ನು ಸಂಗ್ರಹಿಸಲಾಗುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಈ) | ಹಾಗಾದಲ್ಲಿ, ಸರ್ಕಾರವು ಇದರ ಸಂಬಂಧ ಇಲ್ಲಿಯವರೆಗೆ ನಡೆಸಿರುವ ಪತ್ರ ವ್ಯವಹಾರಗಳ ಯಥಾಪ್ರತಿಗಳನ್ನು ನೀಡುವುದು; (ಮಾಹಿತಿ ನೀಡುವುದು) | |
| ಉ) | ಒಡಂಬಡಿಕೆ ಅವಧಿ ಮುಗಿದ್ದರೂ ನ್ಯಾಯಾಲಯದ ತಡೆಯಾಜ್ಞೆ ಆದೇಶವಿಲ್ಲದಿದ್ದರೂ, ಕೇವಲ ಸಂಧಾನದ ಹೆಸರಿನಲ್ಲಿ ಸಂಸ್ಥೆಗೆ ಶುಲ್ಕ ಸಂಗ್ರಹಣೆಗೆ ಸರ್ಕಾರ ಅವಕಾಶ ಮಾಡಿಕೊಟ್ಟಿರುವುದಕ್ಕೆ ಕಾರಣಗಳೇನು; | • ನೆಲಮಂಗಲ – ತುಮಕೂರು ವಿಭಾಗಕ್ಕೆ ದಿನಾಂಕ: 06.11.2022ರವರೆಗೆ ಬಳಕೆಯ ಶುಲ್ಕದ ಸಂಗ್ರಹವನ್ನು M/s. JAS Tollway Pvt. Ltd ರವರು ಸಂಗ್ರಹಿಸಿರುತ್ತಾರೆ. ತದನಂತರದಲ್ಲಿ ಆರ್ಬಿಟ್ರೇಟರ್ ರವರ ಆದೇಶ ದಿನಾಂಕ:29.10.2022 ರಂತೆ ದಿನಾಂಕ: 07.11.2022ರಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಹಿಸಿಕೊಂಡಿರುತ್ತಾರೆ. ಮುಂದುವರೆದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುವಂತೆ ರಿಯಾಯಿತಿದಾರರು, Demonetization, Covid-19, ಸ್ಥಳೀಯ ವಾಣಿಜ್ಯ ವಾಹನಗಳ ಸಂಚಾರಕ್ಕಾಗಿ ಅನುಮತಿ ನೀಡಿರುವ ಕಾರಣಗಳಿಂದಾಗಿ ಹೆಚ್ಚುವರಿಯಾಗಿ 257 ದಿನಗಳ ವಿಸ್ತರಣೆಯನ್ನು ಕೋರಿದ್ದು ಈ ಸಂಬಂಧ ಆರ್ಬಿಟ್ರೇಷನ್ ಪ್ರಕರಣದ ವಿಚಾರಣೆಯು ಪ್ರಗತಿಯಲ್ಲಿದ್ದು ಆರ್ಬಿಟ್ರೇಟರ್ ಆದೇಶ ಬಂದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು M/s. JAS Tollway Pvt. Ltd ರವರಿಗೆ ಹೆಚ್ಚುವರಿ ಅವಧಿಯ ಟೋಲ್ ಶುಲ್ಕವನ್ನು ಮರುಪಾವತಿ |

| | | |
|---|---|---|
| | | ಮಾಡಬೇಕಾಗುತ್ತದೆ. ಇದಲ್ಲದೆ, M/s. JAS Tollway Pvt. Ltd ಕಂಪನಿಯವರಿಗೆ ಯೋಜನೆಯನ್ನು BOT (Grant) ಆಧಾರದಲ್ಲಿ ರೂ. 24.84 ಕೋಟಿಗಳ ಅನುದಾನದೊಂದಿಗೆ ವಹಿಸಲಾಗಿರುತ್ತದೆ. ಸದರಿ ಯೋಜನೆಯಲ್ಲಿ ಭೂಸ್ವಾಧೀನ ವೆಚ್ಚ, Change of Scope & Consultancy Services ರವರುಗಳ ವೆಚ್ಚವು ಒಳಗೊಂಡಿರುತ್ತದೆ. ಈ ಬಂಡವಾಳ ಮೊತ್ತವು ಮರುಪಾವತಿ ಆಗುವವರೆಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ದಿನಾಂಕ: 07.11.2022ರಿಂದ ಟೋಲ್ ಶುಲ್ಕ ಸಂಗ್ರಹಿಸುವುದನ್ನು ಮುಂದುವರೆಸಿದ್ದು ಮೆ: ಶ್ರೀ ಸಾಯಿ ಎಂಟರ್ ಪ್ರೈಸಸ್ ರವರ ಮುಖಾಂತರ ಟೋಲ್ ಶುಲ್ಕ ಸಂಗ್ರಹಿಸಲಾಗುತ್ತಿದೆ. ನಂತರ ಪ್ರಸ್ತುತ ಇರುವ ಟೋಲ್ ಶುಲ್ಕದ ಮೇಲೆ ಶೇ.40ರಷ್ಟು ಶುಲ್ಕವನ್ನು ಕಡಿಮೆ ಮಾಡಲಾಗುವುದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಊ) | ಒಂದು ದಿನಕ್ಕೆ ಸರಾಸರಿ ನೆಲಮಂಗಲ ಟೋಲ್ ಮತ್ತು ಕ್ಯಾತ್ಸಂದ್ರ ಟೋಲ್‌ನಲ್ಲಿ ಎಷ್ಟು ಶುಲ್ಕ ಸಂಗ್ರಹವಾಗುತ್ತದೆ; ಈ ಹಣವನ್ನು ಯಾವ ಖಾತೆಯಲ್ಲಿ ಇಡಲಾಗಿದೆ; ಇದಕ್ಕೆ ಜವಾಬ್ದಾರರಾರು? (ವಿವರವಾದ ಮಾಹಿತಿ ನೀಡುವುದು) | • ಬೆಂಗಳೂರು – ನೆಲಮಂಗಲ ವಿಭಾಗದ ಟೋಲ್ ಪ್ಲಾಜಾದಲ್ಲಿ ಸರಾಸರಿ ದಿನ ಒಂದಕ್ಕೆ 26.30 ಲಕ್ಷ ಟೋಲ್ ಸಂಗ್ರಹವಾಗುತ್ತಿದ್ದು, ಮೊತ್ತವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಖಾತೆಗೆ ಜಮಾ ಮಾಡಲಾಗುತ್ತಿದೆ.<br>• ನೆಲಮಂಗಲ – ತುಮಕೂರು ವಿಭಾಗದ, ಟೋಲ್ ಶುಲ್ಕದ ಸಂಗ್ರಹ ಮೊತ್ತವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೇಂದ್ರ ಸ್ಥಾನ, ನವದೆಹಲಿ ರವರ ಟೋಲ್ ಖಾತೆಗೆ ಜಮಾ ಮಾಡಲಾಗುತ್ತದೆ. ದಿನಾಂಕ: 07.11.2022 ರಿಂದ ಸರಾಸರಿ ಟೋಲ್ ಸಂಗ್ರಹಣೆ ಮೊತ್ತ ದಿನ ಒಂದಕ್ಕೆ ಮೊತ್ತ ರೂ. 26,28,999/- ಗಳು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಎಂದು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 425 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು